ನಂಬಿಕೆಗಳು ನನಗೆ ಒಗ್ಗಿಬರುವುದಿಲ್ಲ. ನನ್ನ ಆರಂಭದ ದಿನಗಳಲ್ಲಿ ಬರೆದ ಮೊದಲ ಸಣ್ಣಕಥಾ ಸಂಕಲನ **The Heretics** ಬಗ್ಗೆ ನಿಮಗೆ ಗೊತ್ತಿರಬಹುದು. ಒಪ್ಪಿತ ನಂಬಿಕೆಗಳಿಗೆ ವಿರುದ್ಧವಾದ ಚಿಂತನೆಗಳು ಎಂದೆಂದಿಗೂ ನೈಜವಾದವು ಮತ್ತು ಸೃಜಶೀಲವಾದವು. ನನ್ನ ಯೌವನದಲ್ಲಿ ನಾನು ಬಹುವಾಗಿ ಓದುತ್ತಿದ್ದ ಪುಸ್ತಕ ಜಾಗತಿಕ ಧರ್ಮಗಳ ಕುರಿತಾದದ್ದು. ನನ್ನ ತಾಯಿಯ ಪುಸ್ತಕಗಳ ಕಪಾಟಿನಲ್ಲಿದ್ದ ಆ ಪುಸ್ತಕವೇ ನನ್ನ ಅಚ್ಚುಮೆಚ್ಚಿನ ಪುಸ್ತಕ. ಅದೊಂದು ಅದ್ಭುತವಾದ ಪುಸ್ತಕ, ಬಹು ಆಕರ್ಷಣೀಯವೂ ಹೌದು. ಆಧುನಿಕ ಸ್ತ್ರೀವಾದಿಗಳು 'ಮಾಟಗಾತಿ' (**Witch**) ಪದ ಮತ್ತದರ ಅರ್ಥವನ್ನು ಪುನರ್ ನಿರ್ಮಿಸಿದಾಗ ನನಗೆ ಅತೀವ ಸಂತೋಷವಾಯಿತು.

◆ **ಕನಕರಾಜ್: ಲೂಯಿಸಾ ವೆಲಂಜುವೆಲಾ ಅವರ ಗದ್ಯಕ್ಕೆ ಭವಿಷ್ಯದ ಗುಣವಿದೆ – ಇದು ನಿಮ್ಮ ಬರಹಗಳ ಬಗ್ಗೆ ದಕ್ಷಿಣ ಅಮೆರಿಕ ಸಾಹಿತ್ಯದ ಬಹುಮುಖ್ಯ ಬರಹಗಾರರಾದ ಯುಲಿಯೊ ಕೊರ್ತಜರ್ ಬರೆದ ಮಾತು. ಸಾವಿರಾರು ಬರಹಗಾರರು ಹಾಗೇ ಭಾವಿಸುತ್ತಾರೆ ಕೂಡ. ಪ್ರತಿ ಯುಗಕ್ಕೂ ಭಿನ್ನ ಭಿನ್ನ ಸಮಸ್ಯೆಗಳಿದ್ದು, ಅವುಗಳನ್ನು ಸೂಕ್ಷ್ಮ ಬರಹಗಾರರು ಮುಂಚಿತವಾಗಿಯೇ ಗ್ರಹಿಸುತ್ತಾರೆಯೇ ಅಥವಾ ಈ ಲೋಕದ ಸಮಸ್ಯೆಗಳು ಎಲ್ಲಾ ಕಾಲಗಳಲ್ಲೂ ಒಂದೇ ತೆರನಾಗಿರುವುದರಿಂದ ಬರಹಗಾರರು ಬರೆಯುವುದಕ್ಕೆಲ್ಲ ಭವಿಷ್ಯದ ಗುಣವೊಂದಿರುತ್ತದೆ ಎನ್ನುತ್ತೀರಾ?**

ಭವಿಷ್ಯತ್ತನ್ನು ಮುಂಚಿತವಾಗಿಯೇ ಗ್ರಹಿಸುವ ಶಕ್ತಿ ನನ್ನಲ್ಲಿದೆ ಎಂದೇ ಭಾವಿಸುತ್ತೇನೆ. ಬರೆಯುವಾಗ ನಾನದನ್ನು ಗಮನಿಸುವುದಿಲ್ಲ. ಕೆಲ ಕಾಲದ ನಂತರ ಅದು ಗೋಚರಿಸುತ್ತದೆ. ಓದುಗರು ಅದನ್ನು ಗುರುತಿಸುತ್ತಾರೆ. ಹಲವಾರು ಬರಹಗಾರರು ಈ ತೆರನಾದ ಅನುಭವಕ್ಕೆ ಒಳಗಾಗಿರುತ್ತಾರೆ. ಸೃಜನಶೀಲ ಕೃತಿಯೊಂದನ್ನು ಬರೆಯುತ್ತಿರುವಾಗ ಭಾವದ ತಂತಿಗಳು (ಕೊರ್ತಜರ್ ಇದನ್ನು 'ರೇಡಾರ್' ಎನ್ನುತ್ತಾರೆ) ಮೀಟುತ್ತವೆ ಎಂದೇ ಭಾವಿಸುತ್ತೇನೆ. ಈ ಮುಂಚೆಯೇ ಗಾಳಿಯಲ್ಲಿ ತೇಲುತ್ತಿರುವ

> **ಯುವ ಬರಹಗಾರರಿಗೆ ನಾನು ಹೇಳುವುದಿಷ್ಟೆ: ಓದು, ಓದು, ಓದು ಎಂಬುದೇ. ಸಾಹಿತ್ಯ ಮಾತ್ರವಲ್ಲ, ಕೈಗೆ ಏನು ಸಿಗುತ್ತದೆಯೋ ಅದನ್ನೆಲ್ಲ ಓದಿ. ತಿಳಿದುಕೊಳ್ಳುವ ಕುತೂಹಲ ಬಹುಮುಖ್ಯವಾದುದು.**

ಕಾಲದ ವಾಸನೆಯನ್ನು ಎಳೆಯುವುದು, ಆದರೆ ಅದನ್ನು ವೈಚಾರಿಕ ದೃಷ್ಟಿಕೋನದಿಂದ ನೋಡಿದಾಗ ಒಪ್ಪಿಕೊಳ್ಳುವುದು ಕಷ್ಟ.

◆ **ಪೆರುಂದೇವಿ: ನಿಮ್ಮ ಸಣ್ಣಕಥೆಗಳಲ್ಲಿ ತುಂಬಾ ಮಕ್ಕಳನ್ನು ಕಾಣಬಹುದು, ಮುಖ್ಯವಾಗಿ ಕಥೆಗಳನ್ನು ನಿರೂಪಿಸುವ ಮಕ್ಕಳನ್ನು. ಅವರ ಬಗ್ಗೆ ನಿಮ್ಮ ಸಾಮಾನ್ಯ ಗ್ರಹಿಕೆಯೇನು? ಮಕ್ಕಳ ಕಥೆಗಳನ್ನು ಅವರಿಂದಲೇ ಕೇಳಿದ್ದೀರಾ?**

ಅವು ನನ್ನ ಆರಂಭದ ಕಥೆಗಳು. ನಾನು ತಾಯಿಯಾಗಿದ್ದಾಗ, ಮಕ್ಕಳಿಗೆ ಮಕ್ಕಳಾಗಿ ಬದುಕಿದ್ದ ದಿನಗಳ ಕಥೆಗಳವು. ನಾನೀಗ ಆ ಕಥೆಗಳ ದಾಟಿ ಬಂದಿದ್ದೇನೆ. ಮೊಮ್ಮಕ್ಕಳಾದ ನಂತರ ಅವರುಗಳಿಗಾಗಿ ಮತ್ತಷ್ಟು ಕಥೆಗಳನ್ನು ಸೃಷ್ಟಿಸಿದೆ. ಆದರೆ, ಅವುಗಳನ್ನು ಬರೆಯಲಿಲ್ಲ. ಈಗ ಅವುಗಳೆಲ್ಲವನ್ನು ಮರೆತುಹೋಗಿರುವೆ. 'ಬರಹಗಾರರೊಳಗಿರುವ ಮಗು' ಎನ್ನುವ ಮಾತಲ್ಲಿ ನನಗೆ ನಂಬಿಕೆಯಿಲ್ಲ... ಆದರೂ ಯಾರಿಗೆ ಗೊತ್ತು, ಇದ್ದರೂ ಇರಬಹುದೇನೊ!

◆ **ಕನಕರಾಜ್: ಯಾವ ಬರಹಗಾರರ ಕೃತಿಗಳು ಮತ್ತು ಸಿದ್ಧಾಂತಗಳು ನಿಮ್ಮನ್ನು ಪ್ರಭಾವಿಸಿವೆ ಎಂದು ಕೇಳಬಹುದೆ? ಹಾಗೇನಾದರೂ ಇದ್ದಲ್ಲಿ ಅವು ನಿಮ್ಮ ಯೋಚನಾಕ್ರಮದ ಮೇಲೆ ಯಾವ ರೀತಿಯ ಪ್ರಭಾವ ಬೀರಿವೆ?**